## Prajavani

**Date:** Sunday, 22 July 2012 **Page No.** 3b

**Edition:** Mysore **Language:** Kannada

# ‘ಆರೋಗ್ಯ ಕ್ಷೇತ್ರ ಉದ್ಯೋಗಾವಕಾಶಗಳ ಆಗರ’

ಪ್ರಜಾವಾಣಿ ವಾರ್ತೆ

ಮೈಸೂರು: ಸಮಾಜದ ಕೆಳಸ್ತರದಿಂದ ಉನ್ನತ ಸ್ತರದ ಎಲ್ಲರಿಗೂ ಉದ್ಯೋಗಾವಕಾಶಗಳನ್ನು ನೀಡಬಲ್ಲ ಅತ್ಯಂತ ದೊಡ್ಡ ಕ್ಷೇತ್ರ ಆರೋಗ್ಯ ನಿರ್ವಹಣೆಯ ಕ್ಷೇತ್ರ ಎಂದು ನಾರಾಯಣ ಹೃದಯಾಲಯದ ಸಂಸ್ಥಾಪಕ ಡಾ. ದೇವಿಪ್ರಸಾದ ಶೆಟ್ಟಿ ಹೇಳಿದರು.

ಶನಿವಾರ ಎಸ್‌ಡಿಎಂ ನಿರ್ವಹಣಾಶಾಸ್ತ್ರ ಅಭಿವೃದ್ಧಿ ಸಂಸ್ಥೆಯ ಸಂಸ್ಥಾಪನಾ ದಿನದ ಉಪನ್ಯಾಸ ನೀಡಿದ ಅವರು, ‘ಕೃಷಿ ಕ್ಷೇತ್ರ ಹೊರತುಪಡಿಸಿದರೆ ಅತಿ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಯಾಗುತ್ತಿರುವುದು ಆರೋಗ್ಯ ನಿರ್ವಹಣೆ ಕ್ಷೇತ್ರದಲ್ಲಿಯೇ. ಮಾಹಿತಿ ತಂತ್ರಜ್ಞಾನ, ಸಾಫ್ಟ್‌ವೇರ್ ಉದ್ಯಮಗಳಿಗಿಂತಲೂ ಹೆಚ್ಚು ಪ್ರಮಾಣದ ಉದ್ಯೋಗಗಳು ಇಲ್ಲಿವೆ. ಅದರಲ್ಲೂ ಬೇರೆ ಉದ್ಯಮಗಳಲ್ಲಿ ಕೇವಲ ಉನ್ನತಸ್ತರದ ವಿದ್ಯಾವಂತರಿಗೆ ಅವಕಾಶವಿದೆ. ಎಲ್ಲ ಹಂತದಲ್ಲಿಯೂ ಎಲ್ಲ ವರ್ಗದ ಜನರಿಗೆ ಉದ್ಯೋಗಾವಕಾಶಗಳಿವೆ. ಆಸ್ಪತ್ರೆಗಳು ಕೇವಲ ವೈದ್ಯರಿಂದ ನಡೆಯುತ್ತವೆ ಎನ್ನುವುದು ತಪ್ಪು ಕಲ್ಪನೆ. ನರ್ಸ್‌ಗಳು, ಆಯಾಗಳು, ಆಡಳಿತ ಕಚೇರಿ ಸಿಬ್ಬಂದಿ ಸೇರಿದಂತೆ ಹಲವರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಹೇಳಿದರು.

‘ಬಡಜನರಿಗೆ ಮತ್ತು ಗ್ರಾಮೀಣ ಭಾಗದವರಿಗೆ ಹೈಟೆಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಆರೋಗ್ಯ ವಿಮಾ ಯೋಜನೆಗಳು ಸಹಕಾರಿಯಾಗಿವೆ. ಸರ್ಕಾರಗಳೇ ಈ ವಿಮಾ ಯೋಜನೆಗಳನ್ನು ಪ್ರಕಟಿಸುತ್ತಿವೆ. ಪ್ರತಿಯಾಗಿ ರಾಜಕೀಯ ಪಕ್ಷಗಳಿಗೆ ಉತ್ತಮ ಜನಸ್ಪಂದನೆ ಸಿಗುತ್ತಿರುವುದು ಸುಳ್ಳಲ್ಲ. ಆಂಧ್ರ ಪ್ರದೇಶದಲ್ಲಿ ರಾಜೀವ ಆರೋಗ್ಯಶ್ರೀ, ತಮಿಳುನಾಡಿನಲ್ಲಿ ಕಲ್ಯೆಂಗಾರ್ ವಿಮೆ, ಕರ್ನಾಟಕದಲ್ಲಿ ವಾಜಪೇಯಿ ಆರೋಗ್ಯಶ್ರೀ ವಿಮಾ ಯೋಜನೆಗಳು ಪ್ರಚಲಿತದಲ್ಲಿವೆ’ ಎಂದು ಹೇಳಿದರು.

‘ವೈದ್ಯಕೀಯ ವೆಚ್ಚ ಹೆಚ್ಚಾಗಲು ಹಲವು ಕಾರಣಗಳಿವೆ. ಸರ್ಕಾರವು ಒಂದೆಡೆ ಐಟಿ, ಬಿಟಿ ಉದ್ಯಮಗಳಿಗೆ ಹಲವಾರು ಸಬ್ಸಿಡಿ, ತೆರಿಗೆ ವಿನಾಯಿತಿಗಳನ್ನು ನೀಡುತ್ತದೆ. ಆದರೆ ಅದೇ ಶಾಪಿಂಗ್ ಮಾಲ್‌ಗಳು, ಮನರಂಜನಾ ಸ್ಥಳಗಳಿಗೆ ಹಾಕುವ ತೆರಿಗೆಯನ್ನು ಆಸ್ಪತ್ರೆಗಳಿಗೆ ವಿಧಿಸುತ್ತದೆ. ಅಲ್ಲದೇ ವೈದ್ಯಕೀಯ ತಪಾಸಣೆಗಳಲ್ಲಿ ಉಪಯೋಗಿಸಲಾಗುವ ಅತ್ಯಾಧುನಿಕ ಸಲಕರಣೆಗಳು ಬಹಳಷ್ಟು ದುಬಾರಿಯಾಗಿವೆ. ಒಂದು ಸಿಟಿ ಸ್ಕ್ಯಾನ್ ಯಂತ್ರವನ್ನು ಹೆಚ್ಚೆಂದರೆ 6-7 ವರ್ಷಗಳವರೆಗೆ ಬಳಸಲು ಸಾಧ್ಯ. ನಮ್ಮ ಸಂಸ್ಥೆಯಲ್ಲಿ ಸಿಟಿ ಸ್ಕ್ಯಾನ್ ಯಂತ್ರದ ಕಾರ್ಯಕ್ಷಮತೆಯನ್ನು 14 ವರ್ಷಕ್ಕೆ ಹೆಚ್ಚಿಸುವಂತಹ ಸೇವೆ ಟ್ರೆಂಡೆಕ್ಸ್ ಅನ್ನು ಅಳವಡಿಸಿಕೊಂಡಿದ್ದೇವೆ’ ಎಂದರು.

‘ಆಸ್ಪತ್ರೆಗಳು ಬಳಸುವ ವಿದ್ಯುತ್ ಮೇಲೆ ಅತಿ ಹೆಚ್ಚು ಶುಲ್ಕವನ್ನು ವಿಧಿಸಲಾಗುತ್ತಿದೆ. ಸೇವಾ ತೆರಿಗೆಯನ್ನು ಅತಿಯಾಗಿ ವಿಧಿಸಿದಾಗ ನಾವೆಲ್ಲ ಪ್ರತಿಭಟಿಸಿದ್ದೆವು. ಇವೆಲ್ಲ ಕಾರಣಗಳಿಂದ ರೋಗಿಯ ಮೇಲೆ ಹೆಚ್ಚು ಹೊರೆ ಬೀಳುತ್ತದೆ’ ಎಂದರು.

‘ಮಹಿಳೆಯರಿಗೆ ಅತಿ ಹೆಚ್ಚು ಉದ್ಯೋಗ ನೀಡಿದ ಸಂಸ್ಥೆ ನಮ್ಮದು. ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗ ನೀಡಿದಾಗ ಅವರು ಸಬಲರಾಗುತ್ತದೆ. ಒಬ್ಬ ಸಬಲ ಮಹಿಳೆಯು ತನ್ನ ಮಕ್ಕಳನ್ನು ಶಿಸ್ತಿನಿಂದ ಬೆಳೆಸುತ್ತಾಳೆ. ಮುಂದೆ ಆ ಮಕ್ಕಳೇ ದೇಶದ ಬೆನ್ನೆಲುಬಾಗುತ್ತಾರೆ. ಆದ್ದರಿಂದ ಮಹಿಳೆಯರ ಸಬಲೀಕರಣಕ್ಕೆ ನಮ್ಮ ಸಂಸ್ಥೆ ಆದ್ಯತೆ ನೀಡಿದೆ. ಆಸ್ಪತ್ರೆಯ ಪ್ರತಿಯೊಂದು ಹಂತದಲ್ಲಿಯೂ ಮಹಿಳಾ ಉದ್ಯೋಗಿಗಳು ಇದ್ದಾರೆ’ ಎಂದು ಹೆಮ್ಮೆಯಿಂದ ಹೇಳಿದರು.

‘ಸರ್ಕಾರಿ ನಿಯಮಗಳು ವಿಚಿತ್ರವಾಗಿವೆ. ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ವೈದ್ಯರಿಗೆ ಸಲಕರಣೆಗಳನ್ನು ಒದಗಿಸಲು ಬಿಎಸ್ಸಿ ನರ್ಸಿಂಗ್ ಪದವಿ ಪಡೆದವರ ಅಗತ್ಯವೇನು. ಅವರ ಪ್ರತಿಭೆಯನ್ನು ನಾವು ವ್ಯರ್ಥ ಮಾಡಿದಂತಲ್ಲವೇ. ನಮ್ಮ ದೇಶದಲ್ಲಿ ಆಸ್ಪತ್ರೆಗಳನ್ನು ವೈದ್ಯರು (ಎಂಬಿಬಿಎಸ್) ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಇದು ಬದಲಾಗಬೇಕು. ಎಲ್ಲ ವೈದ್ಯರೂ ಉತ್ತಮ ನಿರ್ವಹಣಾ ಶಾಸ್ತ್ರಜ್ಞರಾಗಿರುವುದಿಲ್ಲ. ನಿರ್ವಹಣೆಯ ಕ್ಷೇತ್ರದಲ್ಲಿ ತರಬೇತಿ ಪಡೆದ ಮತ್ತು ಅನುಭವವಿರುವ ಪದವೀಧರರಿಗೆ ಅವಕಾಶ ನೀಡಬೇಕು. ಆಗ ಸಮಗ್ರ ಅಭಿವೃದ್ಧಿ ಸಾಧ್ಯ’ ಎಂದು ಸಲಹೆ ನೀಡಿದರು.

ಧರ್ಮಸ್ಥಳ ಧರ್ಮಾಧಿಕಾರಿ ಮತ್ತು ಎಸ್‌ಡಿಎಂ ಅಧ್ಯಕ್ಷ ಡಾ. ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆ ವಹಿಸಿದ್ದರು. ಡಾ. ಎಚ್. ಗಾಯಿತ್ರಿ ಪರಿಚಯಿಸಿದರು. ನಿರ್ದೇಶಕ ಡಾ. ಎನ್. ಆರ್. ಪರಶುರಾಮ್ ಸ್ವಾಗತಿಸಿದರು. ಡಾ. ಎಂ.ಆರ್. ಸುರೇಶ್ ವಂದಿಸಿದರು.



ಮೈಸೂರಿನ ಎಸ್‌ಡಿಎಂ ನಿರ್ವಹಣಾಶಾಸ್ತ್ರ ಅಭಿವೃದ್ಧಿ ಸಂಸ್ಥೆಯಲ್ಲಿ ಶನಿವಾರ ಸಂಸ್ಥಾಪನಾ ದಿನದ ಅಂಗವಾಗಿ ಉಪನ್ಯಾಸ ನೀಡಿಲು ಆಗಮಿಸಿದ್ದ ನಾರಾಯಣ ಹೃದಯಾಲಯ ಸಂಸ್ಥಾಪಕ ಡಾ. ದೇವಿಪ್ರಸಾದ್ ಶೆಟ್ಟಿ ಅವರಿಗೆ ಎಸ್‌ಡಿಎಂ ಸಂಸ್ಥೆ ಅಧ್ಯಕ್ಷ ಡಾ. ವೀರೇಂದ್ರ ಹೆಗ್ಗಡೆ ಅವರು ಸಂಸ್ಥೆಯ ಬಗ್ಗೆ ವಿವರಿಸಿದರು. ಡಾ. ಪರಶುರಾಮನ್ ಹಾಜರಿದ್ದರು.

### ಹೃದಯತಜ್ಞನ ನೋವಿನ ಮಾತು!

ಮೈಸೂರು: ‘ಒಬ್ಬ ತಾಯಿ ತನ್ನ ಮಗುವಿನೊಂದಿಗೆ ನನ್ನ ಹತ್ತಿರ ಬರುತ್ತಾಳೆ. ಆ ಮಗುವನ್ನು ಪರೀಕ್ಷಿಸಿ ಅದಕ್ಕೆ ಹೃದಯದಲ್ಲಿ ರಂಧ್ರ ಇದೆ. ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ಹೇಳಿದ ಕೂಡಲೇ, ಆ ತಾಯಿಯಿಂದ ಮುಂದೆ ಬರುವ ಪ್ರಶ್ನೆಯೆಂದರೆ ಎಷ್ಟು ಖರ್ಚಾಗುತ್ತೆ. ಆಗ ನಾನು 70 ಸಾವಿರ ಎಂದು ಹೇಳಬೇಕಾಗುತ್ತದೆ. ಆ ಮಗುವಿನ ಜೀವದ ಬೆಲೆಯ ಸ್ಟಿಕರ್ ಹಚ್ಚಬೇಕು. ಇದು ನನ್ನ ವೃತ್ತಿಜೀವನದಲ್ಲಿ ಎದುರಿಸುತ್ತಿರುವ ಅತ್ಯಂತ ನೋವಿನ ವಿಷಯ’

ನಾರಾಯಣ ಹೃದಯಾಲಯದ ಸಂಸ್ಥಾಪಕ ಡಾ. ದೇವಿಪ್ರಸಾದ ಶೆಟ್ಟಿಯವರ ಮನದಾಳದ ನೋವು ಇದು.

ಶನಿವಾರ ಎಸ್‌ಡಿಎಂ ನಿರ್ವಹಣಾಶಾಸ್ತ್ರ ಅಭಿವೃದ್ಧಿ ಸಂಸ್ಥೆಯ ಸಂಸ್ಥಾಪನ ದಿನದ ಅಂಗವಾಗಿ ಪ್ರೇಕ್ಷಕರೊಬ್ಬರ ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

‘ವೈದ್ಯಕೀಯ ವೃತ್ತಿಯಲ್ಲಿ ಒಬ್ಬ ವ್ಯಕ್ತಿಯ ಜೀವಕ್ಕೆ ದರಪಟ್ಟಿಯನ್ನು ಹಚ್ಚುವುದು ಬಹಳ ಸಂಕಟದ ವಿಷಯ. ಆದರೆ ಇದು ಅನಿವಾರ್ಯವಾಗುತ್ತದೆ. ವೈದ್ಯಕೀಯ ವೃತ್ತಿಯು ಯಾವುದೇ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅವಲಂಬಿತವಾದ ಉದ್ಯಮವಲ್ಲ. ಕೌಶಲ್ಯಪೂರ್ಣ ವ್ಯಕ್ತಿಗಳಿಂದ ನಡೆಯುವಂತಹ ಉದ್ಯಮ. ಆದ್ದರಿಂದ ವೈದ್ಯಕೀಯ ಶಿಕ್ಷಣ ಮಾದರಿ ಮತ್ತು ಕಾಲೇಜುಗಳ ಸಂಖ್ಯೆ ಹೆಚ್ಚಬೇಕು. ಪ್ರತಿಯೊಂದು ಜಿಲ್ಲಾಸ್ಪತ್ರೆಗೂ ಹೊಂದಿಕೊಂಡಂತೆ ಒಂದು ವೈದ್ಯಕೀಯ ಕಾಲೇಜು ಆರಂಭವಾದರೆ, ಓದಲು ಬರುವವರ ಸಂಖ್ಯೆಯೂ ಹೆಚ್ಚಿ, ಶಿಕ್ಷಣದ ವೆಚ್ಚವೂ ಕಡಿಮೆಯಾಗುತ್ತದೆ’ ಎಂದು ಹೇಳಿದರು.

# ನಾರಾಯಣ ಹೃದಯಾಲಯದಿಂದ ಹೆಲ್ತ್ ಸಿಟಿ ನಿರ್ಮಾಣ

ಪ್ರಜಾವಾಣಿ ವಾರ್ತೆ

ಮೈಸೂರು: ಕಡಿಮೆ ವೆಚ್ಚದ ಚಿಕಿತ್ಸೆ ಮತ್ತು ಆರೋಗ್ಯ ನಿರ್ವಹಣೆ ನೀಡುವ ಮಹತ್ವಾಕಾಂಕ್ಷೆಯ ‘ಹೆಲ್ತ್ ಸಿಟಿ’ ನಿರ್ಮಾಣವನ್ನು ಬೆಂಗಳೂರಿನ ನಾರಾಯಣ ಹೃದಯಾಲಯ ಕೈಗೆತ್ತಿಕೊಂಡಿದೆ. ಮೈಸೂರಿನಲ್ಲಿಯೂ ಇದು ನಿರ್ಮಾಣವಾಗಲಿದೆ ಎಂದು ನಾರಾಯಣ ಹೃದಯಾಲಯದ ಸಂಸ್ಥಾಪಕ ಡಾ. ದೇವಿಪ್ರಸಾದ್ ಶೆಟ್ಟಿ ಹೇಳಿದರು.

ಶನಿವಾರ ಎಸ್‌ಡಿಎಂ ನಿರ್ವಹಣಾಶಾಸ್ತ್ರ ಅಭಿವೃದ್ಧಿ ಸಂಸ್ಥೆಯ ಸಂಸ್ಥಾಪನಾ ದಿನದ ಉಪನ್ಯಾಸ ನೀಡಿದ ಅವರು, ‘ಒಟ್ಟು 300 ಹಾಸಿಗೆಗಳ ಈ ಹೆಲ್ತ್ ಸಿಟಿಯಲ್ಲಿ ದಿನವೊಂದಕ್ಕೆ 60ಕ್ಕೂ ಹೆಚ್ಚು ಹೃದಯ ಶಸ್ತ್ರಚಿಕಿತ್ಸೆಗಳನ್ನು ಮಾಡುವ ಅವಕಾಶ ವಿರುತ್ತದೆ. ಒಟ್ಟು ಆರರಿಂದ ಏಳು ಮಿಲಿಯನ್ ಡಾಲರ್ ವೆಚ್ಚದಲ್ಲಿ ಈ ಸುಸಜ್ಜಿತ ಆಸ್ಪತ್ರೆ ಸಮೂಹ ತಲೆ ಎತ್ತಲಿದೆ. ಎಲ್ ಆ್ಯಂಡ್ ಟಿ ಸಂಸ್ಥೆಯು ನಿರ್ಮಾಣ ಕಾರ್ಯದ ಉಸ್ತುವಾರಿ ವಹಿಸಲಿದ್ದು, ಆರು ತಿಂಗಳಲ್ಲಿ ಸಂಪೂರ್ಣಗೊಳ್ಳುವುದು’ ಎಂದರು.

‘ದೇಶದ ವಿವಿಧ ನಗರಗಳಲ್ಲಿ ಇಂತಹ ಹೆಲ್ತ್ ಸಿಟಿ ನಿರ್ಮಿಸಲಾಗುತ್ತಿದ್ದು ಒಟ್ಟು 30 ಸಾವಿರ ಹಾಸಿಗೆಗಳ ಸೌಲಭ್ಯವನ್ನು ಅಭಿವೃದ್ಧಿಪಡಿಸುವುದು ನಮ್ಮ ಉದ್ದೇಶ. ಬಡ ಮತ್ತು ಕೆಳ ಮಧ್ಯಮವರ್ಗದ ಜನರಿಗೆ ಈ ಹೆಲ್ತ್ ಸಿಟಿಯ ಮೂಲಕ ಆರೋಗ್ಯ ಸೇವೆ ನೀಡುವುದು ಉದ್ದೇಶವಾಗಿದೆ’ ಎಂದು ವಿವರಿಸಿದರು.

‘ಈ ಆಸ್ಪತ್ರೆಯಲ್ಲಿ ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ ಇರುವುದಿಲ್ಲ. ದೇಶದ 14 ಕೇಂದ್ರಗಳಲ್ಲಿ ಮೂತ್ರಕೋಶದ ಡಯಾಲಿಸಿಸ್ ಚಿಕಿತ್ಸೆಗೂ ಸೌಲಭ್ಯ ಕಲ್ಪಿಸಲಾಗುತ್ತಿದೆ. ಹೃದ್ರೋಗ ಶಸ್ತ್ರಚಿಕಿತ್ಸೆಯ ಆಸ್ಪತ್ರೆಗಳಲ್ಲಿರುವ ಅತ್ಯಾಧುನಿಕ ಉಪಕರಣಗಳ ಜೊತೆಗೆ ಡಯಾಲಿಸಿಸ್ ಯಂತ್ರದ ನಿರ್ವಹಣೆ ಅತ್ಯಂತ ಕಡಿಮೆಯಲ್ಲಿ ಸಾಧ್ಯವಿದೆ. ಇವತ್ತು ನಮ್ಮ ದೇಶವು ಮಧುಮೇಹದ ರಾಜಧಾನಿಯಾಗುವ ಅಪಾಯದಲ್ಲಿದೆ. ಆದ್ದರಿಂದ ಮೂತ್ರಪಿಂಡದ ಸಮಸ್ಯೆಗಳೂ ಹೆಚ್ಚಾಗಿ ತಲೆದೋರುತ್ತಿವೆ. ಡಯಾಲಿಸಿಸ್ ದುಬಾರಿಯಾದರೆ ಬಡಜನರಿಗೆ ಚಿಕಿತ್ಸೆ ಸಿಗದೇ ಪ್ರಾಣ ಕಳೆದುಕೊಳ್ಳುತ್ತಾರೆ. ಇದನ್ನು ತಪ್ಪಿಸಲು ಹೃದ್ರೋಗ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ನಿರ್ವಹಣೆ ಸುಲಭ ಸಹಕಾರಿ. ಒಂದು ರೈಲಿಗೆ ಹೆಚ್ಚುವರಿ ಬೋಗಿ ಹಾಕಿದಂತೆ ಅಷ್ಟೇ’ ಎಂದು ಹೇಳಿದರು.

Foundation Day Celebration Chief Guest Dr. Devi Prasad Shetty